# ನಗರಪಾಲಿಕೆಗಳಲ್ಲಿ ಮಹಿಳಾ ಸದಸ್ಯರು

## ಅಧ್ಯಯನದ ಒಂದು ವರದಿ

ಆಡಳಿತದಲ್ಲಿ ಪರಿಣಾಮಕಾರಿ ಪಾತ್ರವಹಿಸಲು ಮಾರ್ಗೋಪಾಯಗಳು

ಕರ್ನಾಟಕ, ದಕ್ಷಿಣ ಭಾರತ

(ಎಪ್ರಿಲ್–ಸಪ್ಟಂಬರ್ 2005)


ಸಹಾಯದೊಂದಿಗೆ

**ಫ್ರೆಡರಿಕ್ ಈಬರ್ಟ್ ಸ್ಟಿಫ್ಟಂಗ್**

ನವ ದೆಹಲಿ



ನಗರ ಸಂಶೋಧನಾ ಕೇಂದ್ರ (ರಿ)

ಇ–1, ಮೈತ್ರಿ ಅಪಾರ್ಟಮೆಂಟ್ಸ,

6ನೇ ಮುಖ್ಯ ರಸ್ತೆ, 15ನೇ ಅಡ್ಡ ರಸ್ತೆ,

ಮಲ್ಲೇಶ್ವರಂ, ಬೆಂಗಳೂರು–560003

ಕರ್ನಾಟಕ. ಭಾರತ

ದೂರವಾಣಿ: 0091–80–23364509, 09488–49353

ಫ್ಯಾಕ್ಸ್: 0091–80–22921033

ಈಮೆಲ್: urcblr@gmail.com



ಮಾರ್ಚ್ 2007

© ಫ್ರೆಡರಿಕ್–ಈಬರ್ಟ್–ಸ್ಟಿಫ್ಟಂಗ್, ಮಾರ್ಚ್ 2007

ಪ್ರಕಾಶಕರು :

**ಫ್ರೆಡರಿಕ್–ಈಬರ್ಟ್–ಸ್ಟಿಫ್ಟಂಗ್,** (ಭಾರತ ಕಛೇರಿ)

ಕೆ–70ಬಿ, ಹೌಜ್ ಕಾಸ್ ಎನ್‌ಕ್ಲೇವ್,

ನವದೆಹಲಿ.

ಈಮೆಲ್: fes@fesindia.org

ವಿನ್ಯಾಸ ಮತ್ತು ಮುದ್ರಣ :

**ಅಕ್ಷರೋಗ್ರಾಫಿಕ್ಸ್**

ನಂ. 643, 12ನೇ ಅಡ್ಡರಸ್ತೆ,

ಎಂ.ಸಿ. ಲೇಔಟ್, ವಿಜಯನಗರ,

ಬೆಂಗಳೂರು – 560 040.

ಐ.ಎಸ್.ಬಿ.ಎನ್.

81–7440–0640–8

# ಅಧ್ಯಯನ ತಂಡ

ಸಂಶೋಧನೆ ಸಂಯೋಜಕ

**ಗುರುರಾಜ ಬುಧ್ಯ**

ಸಂಶೋಧನೆ ಸಹಾಯಕ

**ರಾಘವೇಂದ್ರ.ಎಸ್.ಆರ್.**

## ಸಹಯೋಗೀ ಸಂಘಟನೆಗಳು

**ಮಕ್ಕಳ ಕಲ್ಯಾಣಕ್ಕಾಗಿ ಕೊಡಗು ಜಿಲ್ಲಾ ಪರಿಷತ್ತು**
ಸಂಪರ್ಕ ವ್ಯಕ್ತಿ : ಸೀತಾಲಕ್ಷ್ಮಿ ರಾಮಚಂದ್ರ, ಕಾರ್ಯದರ್ಶಿ
ಕ್ಷೇತ್ರ ಸಹಾಯಕಿ : ಸಿ.ಎನ್.ಚಂದ್ರಮ್ಮ

**ಡೀಡ್ಸ, ಮಂಗಳೂರು**
ಸಂಪರ್ಕ ವ್ಯಕ್ತಿ : ಮರ್ಲಿನ್ ಮಾರ್ಟಿಸ್, ನಿರ್ದೇಶಕಿ
ಕ್ಷೇತ್ರ ಸಹಾಯಕಿ : ಪ್ರಮೀಳಾ

**ಬಳಕೆದಾರರ ವೇದಿಕೆ, ಉಡುಪಿ**
ಸಂಪರ್ಕ ವ್ಯಕ್ತಿ : ದಾಮೋದರ ಐತಾಳ, ಸಂಚಾಲಕರು
ಕ್ಷೇತ್ರ ಸಹಾಯಕಿ : ಯಶೋದಾ ಶೆಟ್ಟಿ

**ಜಿಲ್ಲಾ ಕೊಳಚೆ ನಿವಾಸಿಗಳ ಸಂಘ, ತುಮಕೂರು**
ಸಂಪರ್ಕ ವ್ಯಕ್ತಿ : ನರಸಿಂಹ ಮೂರ್ತಿ, ಅಧ್ಯಕ್ಷರು
ಕ್ಷೇತ್ರ ಸಹಾಯ : ಟಿ.ಕೆ.ದಯಾನಂದ

**ಪರಿವರ್ತನ. ಹುಬ್ಬಳ್ಳಿ**
ಸಂಪರ್ಕ ವ್ಯಕ್ತಿ : ಸಿ. ಅಮರೇಶ ಹಿಪ್ಪರಗಿ, ಕಾರ್ಯದರ್ಶಿ
ಕ್ಷೇತ್ರ ಸಹಾಯ : ವಿಶ್ವನಾಥ ಹೊರಕೇರಿ

# ಕೃತಜ್ಞತೆಗಳು

ಕರ್ನಾಟಕದ ಉಡುಪಿ ಜಿಲ್ಲೆಯ ಉಡುಪಿ ನಗರಪಾಲಿಕೆಯ ಮಹಿಳಾ ಸದಸ್ಯರ ಜೊತೆಗೆ ನಮ್ಮ ಸಂಭಾಷಣೆಯ ಫಲವಾಗಿ ಹಾಗೂ ನಂತರ ನಗರಪಾಲಿಕೆಯ ಮಹಿಳಾ ಸದಸ್ಯರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ ಹಾಗೂ ಅದರಿಂದ ಕಲಿತುಕೊಳ್ಳುವಂತೆ ಮಾಡಲು ನಾವು ಅವರನ್ನು ಒಟ್ಟಿಗೆ ಸೇರಿಸಲು ಮಾಡಿದ ಪ್ರಯತ್ನಗಳ ಫಲವಾಗಿ ಈ ಅಧ್ಯಯನದ ವಿಚಾರ ಹೊರಮೂಡಿತು. ನಗರಪಾಲಿಕೆಗಳ ಮಹಿಳಾ ಸದಸ್ಯರನ್ನು ಹೊರ ಜಗತ್ತಿಗೆ ಪರಿಚಯಿಸಲು 2003ರ ಜೂನ್ ತಿಂಗಳಲ್ಲಿ ಉಡುಪಿಯಲ್ಲಿ ನಡೆದ ಕಾರ್ಯಕ್ರಮ, 2004ರ ನವಂಬರಿನಲ್ಲಿ ಬೆಂಗಳೂರಿನಲ್ಲಿ ನಡೆದ ನಗರಪಾಲಿಕೆಗಳ ಮಹಿಳಾ ಸದಸ್ಯರ ರಾಜ್ಯ ಮಟ್ಟದ ಕಾರ್ಯಾಗಾರ, 2005ರ ಅಗಸ್ಟ ತಿಂಗಳು ಮೈಸೂರಿನಲ್ಲಿ ಈ ಅಧ್ಯಯನದ ಅಂಗವಾಗಿ ನಡೆಸಲಾದ ಅವರ ತರಬೇತಿ ಕಾರ್ಯಕ್ರಮ ಹಾಗೂ 2005ರ ಸಪ್ಟಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಈ ಅಧ್ಯಯನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ನಡೆದ ಸಭೆ, ಇವು ನಗರಪಾಲಿಕೆಗಳ ಮಹಿಳಾ ಸದಸ್ಯರನ್ನು ಒಂದೆಡೆ ತರಲು ನಾವು ಮಾಡಿದ ವಿಶಿಷ್ಟ ಪ್ರಯತ್ನಗಳಲ್ಲಿ ಹಲವು.

ಈ ಅಧ್ಯಯನದ ಯೋಜನೆಯನ್ನು ಸಿದ್ಧಪಡಿಸುವಾಗಿನಿಂದಲೇ ಸ್ಥಳೀಯ ಸಂಘಟನೆಗಳು, ನಗರಪಾಲಿಕೆಗಳ ಮಹಿಳಾ ಸದಸ್ಯರು, ನಗರಪಾಲಿಕೆಗಳ ಮಾಜಿ ಮಹಿಳಾ ಸದಸ್ಯರು ಹಾಗೂ ಹಿತಚಿಂತಕರನ್ನು ತೊಡಗಿಸಿಕೊಳ್ಳುವ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಈ ವಿಧಾನದ ಬಗ್ಗೆ, ಹಾಗೂ ಈ ಅಧ್ಯಯನದಲ್ಲಿ ಬಳಸಲಾಗುವ ಪ್ರಶ್ನಾವಳಿಯ ಬಗ್ಗೆ ಚರ್ಚೆ ಮಾಡಲು 2005ರ ಎಪ್ರಿಲ್ ತಿಂಗಳಲ್ಲಿ ಹಲವಾರು ಸಭೆಗಳನ್ನು ಕರೆಯಲಾಗಿತು. ಅಧ್ಯಯನ ತಂಡ ಹಲವಾರು ನಗರಗಳಿಗೆ ಭೇಟಿ ನೀಡಿ ನಗರಪಾಲಿಕೆಗಳ ಮಹಿಳಾ ಹಾಗೂ ಪುರುಷ ಸದಸ್ಯರೊಂದಿಗೆ, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳ, ಸದಸ್ಯರೊಂದಿಗೆ ಫಲಪ್ರದವಾದ ಚರ್ಚೆ ನಡೆಸಿತು.

ಈ ಅಧ್ಯಯನಕ್ಕಾಗಿ ನಗರಪಾಲಿಕೆಗಳ ಮಹಿಳಾ ಹಾಗೂ ಪುರುಷ ಸದಸ್ಯರನ್ನು, ರಾಜಕೀಯ ಪಕ್ಷಗಳ ಮುಖಂಡರನ್ನು ಹಾಗೂ ನಗರಪಾಲಿಕೆಗಳ ಅಧಿಕಾರಿ ವರ್ಗಗಳನ್ನು ಭೇಟಿಯಾಗುವಲ್ಲಿ, ಪೂರ್ವ ಸಿದ್ಧತೆಗಳನ್ನು ಮಾಡಿ ಸಹಕರಿಸಿದ ಶ್ರೇಯ ನಮ್ಮ ಸಹಯೋಗೀ ಸಂಘಟನೆಗಳು ಹಾಗೂ ಅವುಗಳ ಸಿಬ್ಬಂದಿ ವರ್ಗಗಳಿಗೆ ಸಲ್ಲಬೇಕು. ಹಾಗೆಯೇ ನಮಗೆ ಸ್ಫೂರ್ತಿ ನೀಡಿ ಹಲವಾರು ಒಳನೋಟಗಳನ್ನು ಒದಗಿಸಿಕೊಟ್ಟು ಸಹಕರಿಸಿದ ಪ್ರೊ: ಭಾರ್ಗವ, ಪ್ರೊ: ಹನುಮಂತ, ಶ್ರೀ ಎಲ್.ಸಿ.ಜೈನ್ ಹಾಗೂ ಶ್ರೀ ಬಾಪು ಹೆದ್ದೂರಶೆಟ್ಟಿಯವರಿಗೂ ನಮ್ಮ ಕೃತಜ್ಞತೆಗಳು ಸಲ್ಲಬೇಕು.

ಈ ಅಧ್ಯಯನದ ಇಡೀ ಪ್ರಕ್ರಿಯೆಯಲ್ಲಿ, ಸಹಯೋಗೀ ಸಂಘಟನೆಗಳೊಂದಿಗೆ ಚರ್ಚಿಸುವಲ್ಲಿ, ವಿವಿಧ ಚಟುವಟಿಕೆಗಳನ್ನು, ಕಾರ್ಯಾಗಾರಗಳನ್ನು ಸಂಘಟಿಸುವುದರಲ್ಲಿ, ಯೋಜನೆಗಳನ್ನು ರೂಪಿಸುವಲ್ಲಿ, ಶ್ರೀ ರಾಘವೇಂದ್ರ ಅವರು ಸಹಾಯ ಮಾಡಿದ್ದಾರೆ. ಅವರಿಲ್ಲದೇ ಈ ಅಧ್ಯಯನ ಸಾಧ್ಯವೇ ಆಗುತ್ತಿರಲಿಲ್ಲ. ನಗರ ಸಂಶೋಧನಾ ಕೇಂದ್ರದ ಸಿಬ್ಬಂದಿ ಸದಸ್ಯರು ಹಾಗೂ ವ್ಯವಸ್ಥಾಪನಾ ಪರಿಷತ್ತಿನ ಸದಸ್ಯರೂ ಕೂಡ ಬಹಳ ಸಹಕಾರಿಯಾಗಿದ್ದರು.

ನಮ್ಮ ಕಾಳಜಿಗಳನ್ನು ಹಂಚಿಕೊಂಡಿದ್ದಕ್ಕಾಗಿ ಹಾಗೂ ರಾಜಕೀಯದ ಪ್ರಕ್ರಿಯೆಯಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ನಾವು ಕೈಗೊಂಡ ಕ್ರಮಗಳನ್ನು ಪ್ರೋತ್ಸಾಹಿಸಿದ್ದಕ್ಕಾಗಿ ಹೊಸ ದೆಹಲಿಯ ಫ್ರೆಡರಿಕ್ ಈಬರ್ಟ ಸ್ಟಿಫ್ಟಂಗ್ ಸಂಸ್ಥೆಯವರಿಗೂ ನಾವು ಆಭಾರಿಯಾಗಿದ್ದೇವೆ.

ಗುರುರಾಜ ಬುಧ್ಯ
ಕಾರ್ಯದರ್ಶಿ – ನಗರ ಸಂಶೋಧನಾ ಕೇಂದ್ರ

# ಮುನ್ನುಡಿ

ನಗರಾಡಳಿತ ಇಂದು, ನಾಗರಿಕರು, ಸ್ಥಳೀಯ ಸಂಸ್ಥೆಗಳು, ರಾಜ್ಯ ಹಾಗೂ ಕೇಂದ್ರ ಸರಕಾರಗಳು ಹಾಗೂ ಈ ಪರಿಧಿಯ ಒಳಗೆ, ಯಾವುದೇ ರಾಜಕೀಯ ಸಂರಚನೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಸ್ವಾಡಳಿತ ಸಂಘಟನೆಗಳು ಮೊದಲಾದ ಹಲವಾರು ವ್ಯಕ್ತಿಗಳು ಹಾಗೂ ಸಂಘಟನೆಗಳನ್ನು ಒಳಗೊಂಡಿದೆ. ಈ ಸಂಸ್ಥೆಗಳ ಚುನಾಯಿತ ಮಹಿಳೆಯರು ಹಾಗೂ ಪುರುಷರು ಜನರಿಗೆ ಹಾಗೂ ಅವರ ಸಮಸ್ಯೆಗಳಿಗೆ ಅತ್ಯಂತ ಹತ್ತಿರ ಇರುವುದರಿಂದ, ಆಡಳಿತದಲ್ಲಿ ಸುಧಾರಣೆಯಾಗಬಹುದು ಎಂಬ ಆಶಾಕಿರಣವನ್ನು ಚುನಾಯಿತ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ, ಆಡಳಿತಾತ್ಮಕ ಹಾಗೂ ಕ್ರಿಯಾತ್ಮಕ ಅಧಿಕಾರಗಳ ವಿಕೇಂದ್ರೀಕರಣದ ಮೇಲೆ ಒತ್ತು ನೀಡುವ ಸಂವಿಧಾನದ 74ನೆಯ ತಿದ್ದುಪಡಿಯು ಮೂಡಿಸಿತು. ಆದರೆ ದುರಾದೃಷ್ಟವಶಾತ್, 1994ರಲ್ಲಿ ಸಂವಿಧಾನದ 74ನೆಯ ತಿದ್ದುಪಡಿ ಜಾರಿಗೆ ಬಂದಾಗಿನಿಂದ ಇದುವರೆಗೆ ಆದ ವ್ಯಾವಹಾರಿಕ ಅನುಭವ ಈ ಆಶೋತ್ತರಗಳನ್ನು ಹುಸಿಗೊಳಿಸಿದೆ. ನಗರಾಡಳಿತ ಸಂಸ್ಥೆಗಳ ಒಂದರ ಮೇಲೊಂದು ಚಾಚಿಕೊಂಡಿರುವ ಅಧಿಕಾರ ವ್ಯಾಪ್ತಿಗಳಿಂದಾಗಿ, ಸ್ವತಂತ್ರ ಅಸ್ತಿತ್ವವುಳ್ಳ ಸಂಸ್ಥೆಗಳು ಹಾಗೂ ಸರಕಾರದ ವಿವಿಧ ಇಲಾಖೆಗಳಿಂದಾಗಿ, ನಾಗರಿಕರಿಗೆ ಸೇವೆಗಳನ್ನು ಒದಗಿಸುವಲ್ಲಿ ಈ ಸಂಸ್ಥೆಗಳಿಗೆ ಸ್ಪಷ್ಟವಾದ ಲಕ್ಷ್ಮಣ ರೇಖೆಗಳು ಇಲ್ಲದಂತಾಗಿವೆ. ಅಷ್ಟೇ ಅಲ್ಲ, ಈ ಸಂಸ್ಥೆಗಳು ಒಂದರ ಮೇಲೊಂದು ಬರಿ ಅಪವಾದವನ್ನು ಹೊರಿಸುವಂತಾಗಿದೆ. ಇವುಗಳ ಜೊತೆಗೆ, ತಮ್ಮ ಸ್ವಾರ್ಥವನ್ನು ಸಾಧಿಸುವ ಗುಂಪುಗಳ ಸಂಚು ಹಾಗೂ ಬಹಳಷ್ಟು ಸಂದರ್ಭಗಳಲ್ಲಿ ನಾಗರಿಕರ ಅಮಾಯಕತನ ಹಾಗೂ ಹಲವು ಬಾರಿಯಂತೂ ಅವರ ನಿರಾಸಕ್ತಿಗಳೂ ಇದರಲ್ಲಿ ಸೇರಿಕೊಂಡಿವೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಇರುವ ಅಡೆತಡೆಗಳನ್ನು ತೊಡೆದು ಹಾಕುವಲ್ಲಿ ಹಾಗೂ ಭೂಮಿಯ ದುರ್ಬಳಕೆಯ ಸಮಸ್ಯೆಗಳ ಬಗ್ಗೆ ಮುಂಬಯಿಯಲ್ಲಿ ಕಂಡುಬಂದ ನಾಗರಿಕರ ಆಂದೋಲನಗಳು ಅಥವಾ ದೆಹಲಿಯಲ್ಲಿ ಕಂಡುಬಂದ ನ್ಯಾಯಾಂಗದ ಕ್ರಿಯಾಶೀಲತೆಗಳು ಬಹಳ ನಿಧಾನವಾಗಿ ಹಾಗೂ ಅತ್ಯಂತ ಕಡಿಮೆ ಪರಿಣಾಮಗಳೊಂದಿಗೆ ಮೂಡಿಬಂದ ಹಲವು ಪ್ರತಿಕ್ರಿಯೆಗಳು. ಇಷ್ಟು ಹೇಳಿದ ನಂತರ, ನಗರಗಳಿಗೆ ಮೂಲಸೌಲಭ್ಯಗಳನ್ನು ಒದಗಿಸುವಲ್ಲಿ ತೊಡಗಿಸಲಾಗುತ್ತಿರುವ ಬೃಹತ್ ಹಣಕಾಸಿನ ನೆರವನ್ನೂ ಗಮನದಲ್ಲಿಟ್ಟುಕೊಳ್ಳುವುದು ಆವಶ್ಯಕ. 63 ನಗರಗಳ ಆಡಳಿತವನ್ನು ಸುಧಾರಿಸುವ, ಅವುಗಳ ಮೂಲಭೂತ ಸೌಲಭ್ಯಗಳ ಬೇಡಿಕೆಯನ್ನು ಪೂರ್ತಿಗೊಳಿಸುವ ಹಾಗೂ ಅವುಗಳ ಬಡವರಿಗೆ ಮೂಲಭೂತ ಸೇವೆಗಳನ್ನು ಒದಗಿಸುವ ಭರವಸೆಯೊಂದಿಗೆ, 2005ರ ಡಿಸೆಂಬರ್‌ನಲ್ಲಿ ಕೇಂದ್ರ ಸರಕಾರವು ಜವಾಹರಲಾಲ್ ನೆಹರು ನಗರಪ್ರದೇಶ ಪುನರ್ನಿರ್ಮಾಣ ಕ್ರಿಯಾಯೋಜನೆಯನ್ನು ರಚಿಸಿತು. ಇದರ ಉದ್ದೇಶ, ಹಸಿವೆಯನ್ನು ಅರ್ಧದಷ್ಟು ಕಡಿಮೆ ಮಾಡುವ ಮೂಲಕ, ಬಡತನವನ್ನು ಕಡಿಮೆ ಮಾಡುವ ಮೂಲಕ ಹಾಗೂ ನೀರನ್ನು ಎಲ್ಲರಿಗೂ ದೊರಕುವಂತೆ ಮಾಡುವ ಮೂಲಕ "ಶತಮಾನದ ಅಭಿವೃದ್ಧಿಯ ಗುರಿ" ಗಳನ್ನು ಸಾಧಿಸುವುದೇ ಆಗಿತ್ತು. ಉದ್ದೇಶಿತ ಸುಧಾರಣೆಗಳಲ್ಲಿ ಹಲವಾರು ಸುಧಾರಣೆಗಳು ಪ್ರಗತಿಪರವಾಗಿದ್ದರೂ ಇಂಥ ಪ್ರಯತ್ನಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕವೇ ಮಾಡುವುದು ಅತ್ಯಂತ ಮುಖ್ಯ. ಹಾಗೂ ಇದು ಸಾಧ್ಯವಾಗಬೇಕಾದರೆ ಜನರ ಚುನಾಯಿತ ಪ್ರತಿನಿಧಿಗಳು ಈ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಕ್ರಿಯಾಶೀಲರೂ ಹಾಗೂ ವಿವೇಚನಾಪರರೂ ಆಗಿರಬೇಕಾಗಿರುವುದು ಆವಶ್ಯಕ.

ಚುನಾಯಿತ ಮಹಿಳಾ ಹಾಗೂ ಪುರುಷ ಪ್ರತಿನಿಧಿಗಳ ಕ್ರಿಯಾತ್ಮಕ ಶಕ್ತಿಯನ್ನು ಬೆಳೆಸಲು ಆಗುತ್ತಿರುವ ಪ್ರಯತ್ನಗಳನ್ನು, ಅವರು ತಮ್ಮ ತಮ್ಮ ಚುನಾವಣಾ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವ ಕ್ರಿಯೆಯ ಹಿನ್ನೆಲೆಯಲ್ಲಿ ನೋಡಬೇಕು. ಪರಿಸ್ಥಿತಿ ಉತ್ತಮಗೊಳ್ಳುವಂತೆ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಿರುವ ಸಂಘಟನೆಗಳ, ಚುನಾಯಿತ ಪ್ರತಿನಿಧಿಗಳ ಹಾಗೂ ಜನ ಸಮುದಾಯಗಳ ಹಲವಾರು ಉದಾಹರಣೆಗಳಿವೆ. ಕರ್ನಾಟಕದ ನಗರಪ್ರದೇಶಗಳಲ್ಲಿ ಆಡಳಿತಾತ್ಮಕ ಹಾಗೂ ಆರ್ಥಿಕ ಸಮಸ್ಯೆಗಳ ಬಗ್ಗೆ ಕ್ರಿಯಾಶೀಲವಾಗಿರುವ ನಗರ ಸಂಶೋಧನಾ ಕೇಂದ್ರ ಇಂಥ ಒಂದು ಸಂಘಟನೆ. ಯೋಜನಾ ಪ್ರಕ್ರಿಯೆಯಲ್ಲಿ ಎಲ್ಲರೂ ಭಾಗವಹಿಸುವಂತೆ ಮಾಡುವ ಮೂಲಕ ಸ್ಥಳೀಯ ಗುಂಪುಗಳು ಹಾಗೂ ಚುನಾಯಿತ ಪ್ರತಿನಿಧಿಗಳ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವುದೇ ಈ ಸಂಘಟನೆಯ ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಇದಕ್ಕೆ ಇನ್ನೊಂದು ಮುಂದಿನ ಹೆಜ್ಜೆಯಾಗಿ, ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ಸಂಬಂಧ ಪಟ್ಟಂತೆ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳಲು ನಗರ ಸಂಶೋಧನಾ ಕೇಂದ್ರ ಈ ಅಧ್ಯಯನವನ್ನು ಕೈಗೆತ್ತಿಕೊಂಡಿತು. ಚುನಾಯಿತ ಮಹಿಳಾ ಪ್ರತಿನಿಧಿಗಳ ಮೇಲೆ ಪ್ರಭಾವ ಬೀರುವ ವಿಷಯಗಳ ವಿಶ್ಲೇಷಣೆ ಹಾಗೂ ರಾಜಕೀಯ ಪಕ್ಷಗಳಲ್ಲಿ, ರಾಜ್ಯ ಸರಕಾರದಲ್ಲಿ ಹಾಗೂ ಇತರೆ ಸಂಘಟನೆಗಳ ಮೂಲಕ ಮಹಿಳಾ ಪ್ರತಿನಿಧಿಗಳಿಗೆ ಲಭ್ಯವಾಗುವ ಸಹಾಯಕ ಸೂತ್ರಗಳ ಅಧ್ಯಯನವೇ ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ನಗರಗಳ ಆಡಳಿತದಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡಲು ಆವಶ್ಯಕ ಕ್ರಮಗಳ ಚೌಕಟ್ಟೊಂದನ್ನು ರಚಿಸುವುದು ಈ ಅಧ್ಯಯನದಿಂದ ಸಾಧ್ಯವಾಗಬಹುದು ಎಂದು ನಂಬಲಾಗಿದೆ.

ಭಾರತದಲ್ಲಿ ಅಭಿವೃದ್ಧಿಯ ಪ್ರಕ್ರಿಯೆಗೆ ಸಂಬಂಧಿಸಿದ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ಸಾಧ್ಯವಾಗುವಂತೆ ಮಾಡಲು ಫ್ರೆಡರಿಕ್ ಈಬರ್ಟ ಸ್ಟಿಫ್ಟುಂಗ್ ಸಂಸ್ಥೆ ಪುಸ್ತಕ ಹಾಗೂ ಪ್ರಬಂಧಗಳ ಒಂದು ಸರಣಿಯನ್ನೇ ಪ್ರಕಟಿಸುತ್ತಿದೆ. ಈ ಪ್ರಕಟಣೆ ಕೂಡ ಅದರದ್ದೇ ಒಂದು ಭಾಗ. ಫ್ರೆಡರಿಕ್ ಈಬರ್ಟ ಸ್ಟಿಫ್ಟುಂಗ್ ಸಂಸ್ಥೆ, ಜರ್ಮನಿಯ ಸರಕಾರದಿಂದ ಬೆಂಬಲ ಪಡೆದಿರುವ ಹಾಗೂ ಲಾಭದ ಉದ್ದೇಶವಿರದ ಒಂದು ಸರಕಾರೇತರ ಸಂಘಟನೆ. ಜನತಾಂತ್ರಿಕ ಸಂರಚನೆಗಳನ್ನು ಸಬಲಗೊಳಿಸುವುದನ್ನೇ ಉದ್ದೇಶವಾಗಿಟ್ಟುಕೊಂಡಿರುವ ನಮ್ಮ ಸಂಘಟನೆ ಜರ್ಮನಿಯಲ್ಲಿ ಹಾಗೂ ಸಹೋದ್ಯೋಗಿ ಸಂಘಟನೆಗಳ ಜೊತೆ ಸೇರಿ ಇತರೆ 100 ಕ್ಕಿಂತ ಹೆಚ್ಚು ದೇಶಗಳಲ್ಲಿ ತರಬೇತಿ ನೀಡಲು ಹಾಗೂ ನೀತಿಗಳನ್ನು ರೂಪಿಸಲು ಸಹಾಯವಾಗುವಂತಹ ಸಂಶೋಧನೆಗಳನ್ನು ನಡೆಸಲು ಸಹಾಯ ಮಾಡುತ್ತಿದೆ. ಈ ಸಂಘಟನೆಯ ಭಾರತದ ಕಛೇರಿ, ನೀತಿಗಳನ್ನು ರೂಪಿಸುವವರೊಡನೆ, ಶೈಕ್ಷಣಿಕ ಹಾಗೂ ಸಂಶೋಧನಾತ್ಮಕ ಸಂಘಟನೆಗಳೊಡನೆ, ಸರಕಾರೇತರ ಸಂಘಟನೆಗಳು ಹಾಗೂ ಕಾರ್ಮಿಕ ಸಂಘಟನೆಗಳೊಡನೆ ಜೊತೆ ಸೇರಿ ಕೆಲಸ ಮಾಡುತ್ತಿದೆ. ಲಿಂಗ ಸಂಬಂಧಿತ ಸಮಗ್ರ ನಿಲುವಿನ ಒಂದು ಭಾಗವಾಗಿ, ಫ್ರೆಡರಿಕ್ ಈಬರ್ಟ ಸ್ಟಿಫ್ಟುಂಗ್ ಸಂಸ್ಥೆಯ ಮಹಿಳೆಯರ ಸಬಲೀಕರಣದ ಯೋಜನೆ, ಮಹಿಳೆಯರ ಆರ್ಥಿಕ ಹಾಗೂ ರಾಜಕೀಯ ಸಬಲೀಕರಣವನ್ನು ಗುರುಯಾಗಿಟ್ಟುಕೊಂಡಿರುವ ಸರಕಾರೇತರ ಹಾಗೂ ಇತರೆ ಸ್ವಸಹಾಯ ಗುಂಪುಗಳ ಪ್ರಯತ್ನಗಳಿಗೆ ಬೆಂಬಲ ನೀಡುತ್ತದೆ. ಆದುದರಿಂದ ಆದಾಯ ಹಾಗೂ ಜೀವನೋಪಾಯಗಳ ಸೃಷ್ಟಿ, ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮಹಿಳೆಯರ ಪಾಲುದಾರಿಕೆ ಹಾಗೂ ಸ್ಥಳಾಂತರಗೊಂಡ ಮಹಿಳೆಯರ ಪುನರ್ಸ್ಥಾಪನೆ, ಇವು ನಮ್ಮ ಸಂಘಟನೆಯ ಆದ್ಯತೆಗಳಾಗಿವೆ. ಈ ಆದ್ಯತೆಗಳ ಸುತ್ತ ಕಾರ್ಯಾಗಾರಗಳನ್ನು, ದುಂಡುಮೇಜಿನ ಚರ್ಚೆಗಳನ್ನು ಕ್ರಿಯಾಧಾರಿತ ಸಂಶೋಧನೆಗಳನ್ನು ಹಾಗೂ ಪ್ರಕಟಣೆಗಳನ್ನು ಮಾಡುವುದು ನಮ್ಮ ಕ್ರಿಯಾಯೋಜನೆಯ ಅವಿಭಾಜ್ಯ ಅಂಗವಾಗಿವೆ.

ದಮಯಂತಿ ಶ್ರೀಧರನ್
ಯೋಜನಾ ಸಲಹಾಕಾರರು
ಫ್ರೆಡರಿಕ್ ಈಬರ್ಟ ಸ್ಟಿಫ್ಟುಂಗ್, ಹೊಸದೆಹಲಿ

# ಒಳನೋಟ


| | | |
|---|---|---|
| 1. | ಹಿನ್ನೆಲೆ | 1 |
| 2. | ಚುನಾಯಿತ ಮಹಿಳಾ ಸದಸ್ಯರ ಬಗ್ಗೆ ಈಗಾಗಲೇ ಆಗಿರುವ ಅಧ್ಯಯನಗಳು. | 5 |
| 3. | ಪ್ರಸ್ತುತ ಅಧ್ಯಯನ | 6 |
| 4. | ಅಧ್ಯಯನದ ವಿಧಾನ | 8 |
| 5. | ಹೊರಮೂಡಿದ ಸಂಗತಿಗಳು | 10 |
| * | ಸಂದರ್ಶಿತರ ಪಾರ್ಶ್ವನೋಟ | 10 |
| * | ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಮಹಿಳೆಯರ ಪ್ರವೇಶ | 10 |
| * | ಮಹಿಳಾ ಸದಸ್ಯರು: ಬೆಂಬಲಗಳು ಹಾಗೂ ಅಡೆತಡೆಗಳು | 12 |
| * | ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಮಹಿಳೆಯರು: ನಿರೀಕ್ಷೆಗಳು | 13 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಪಾತ್ರದ ಸ್ಪಷ್ಟತೆ | 14 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಕೌನ್ಸಿಲ್ ಸಭೆಗಳು | 15 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಪಕ್ಷದ ನಿರ್ಬಂಧಗಳು | 17 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಸರಕಾರ ಹಾಗೂ ಅಧಿಕಾರಿ ವರ್ಗ | 18 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಕಾರ್ಯದಕ್ಷತೆಯ ನಿರೀಕ್ಷೆಗಳು | 20 |
| 6. | ಅಧ್ಯಯನದ ಫಲಿತಾಂಶಗಳು | 22 |
| 7. | ಸಹಾಯ ಸೂತ್ರಗಳು : ರಾಜಕೀಯ ಪಕ್ಷಗಳಿಗಾಗಿ | 24 |
| 8. | ಸಹಾಯ ಸೂತ್ರಗಳು : ರಾಜ್ಯ ಸರ್ಕಾರಗಳಿಗಾಗಿ | 27 |